ಶ್ರೀ ಆರ್. ರೋಷನ್ ಬೇಗ್:- ರೇಟ್ ಕಾಂಟ್ರಾಕ್ಟ್‌ಗೆ ಒಂದು ಕಡೆ ಟ್ರಾನ್ಸ್‌ಫರೆನ್ಸಿ ಆಕ್ಟ್ ಇತ್ತು. ಆ ಆಕ್ಟ್‌ನಿಂದ ಕೆಲವರಿಗೆ ತೊಂದರೆಯಾಗುತ್ತಿತ್ತು. ಮಾರ್ಕೆಂಟಿಂಗ್‌ಗೆ ಈ ಒಂದು ಸಂಸ್ಥೆ ಇತ್ತು. ಅದರಿಂದ ಈಗ ಅದನ್ನು ಮುಚ್ಚಿದ್ದೇವೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಲ್ಲಿ ಮಲ್ಟಿಪ್ಲಿಸಿಟಿ ಆಗಬಾರದೆಂದು ಅಶ್ಯೂರೆನ್ಸ್ ಸಂಸ್ಥೆಯಾಗಬೇಕೆಂದು, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಏನಿದೆ ಆ ಮೂಲಕ ಮಾರ್ಕೆಟಿಂಗ್ ಅನಿಸ್ಸೆನ್ಸ್ ಮಾಡಬೇಕೆಂದು ತೀರ್ಮಾನಿಸಿದ್ದೇವೆ.

ಶ್ರೀ ಎನ್. ಯೋಗೀಶ್ ಭಟ್:- ರಾಜ್ಯದಲ್ಲಿ 2 ಲಕ್ಷದ 40 ಸಾವಿರ ಸಣ್ಣ ಕೈಗಾರಿಕಾ ಘಟಕಗಳಿವೆ.ಅದರಲ್ಲಿ 60 ಪರ್ಸೆಂಟ್ ಘಟಕಗಳು ಮುಚ್ಚುವ ಸ್ಥಿತಿಯಲ್ಲಿವೆ. ಯಾವ ಒಂದು ಚಕ್ರವ್ಯೂಹದಲ್ಲಿ ಅವರು ಸಿಕ್ಕಿಹಾಕಿಕೊಂಡಿದ್ದಾರೆಂದರೆ, ಒಂದು ಕಡೆ 40 ಇಲಾಖೆಗಳಿಂದ ಕ್ಲಿಯರೆನ್ಸ್ ಆಗಬೇಕು. ಸರ್ಕಾರವೇ ಏನಾದರೂ ಮಾಡಿ ಎಗ್ಜಿಟ್ ಪಾಲಿಸಿಯನ್ನು ಡಿಕ್ಲೇರ್ ಮಾಡಬೇಕೆಂದು ಕಳೆದ ಹಲವಾರು ವರ್ಷಗಳಿಂದ ನಾವು ಒತ್ತಾಯಿಸುತ್ತಿದ್ದೇವೆ. ಆ ಪಾಲಿಸಿಯನ್ನು ತಾವೇನಾದರೂ ಘೋಷಣೆ ಮಾಡುತ್ತೀರಾ? ಸರಳವಾಗಿ ಟ್ರಾನ್ಸ್‌ಫರ್ ಮಾಡಲಿಕ್ಕೆ, ಸೇಲ್ ಮಾಡಲಿಕ್ಕೆ ಅನುಕೂಲವಾಗುವ ರೀತಿಯಲ್ಲಿ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಆರ್. ರೋಷನ್ ಬೇಗ್:- ಅವರು ಹೇಳಿರುವ ಪ್ರಶ್ನೆ ಬಗ್ಗೆ ಹೇಳಬೇಕೆಂದರೆ, ಡೆಲ್ಲಿಯಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬೋರ್ಡ್ ಮೀಟಿಂಗ್ ಆಯಿತು. ಶ್ರೀಮತಿ ವಸುಂಧರೆ ರಾಜೇಸಿಂಧ್ಯಾರವರು ಅದರ ಬಗ್ಗೆ ನಮ್ಮ ಜೊತೆ ಚರ್ಚಿಸಿದ್ದಾರೆ. ನಾವು ಆ ಕೂಡಲೇ ಒಂದು ಪಾಲಿಸಿ ಮಾಡುತ್ತಿದ್ದೇವೆ.

ಕರ್ನಾಟಕ ರಾಜ್ಯಕ್ಕೆ ಹೊರರಾಜ್ಯಗಳಿಂದ ಬರುತ್ತಿರುವ ಹಾಲಿನ ಮಾರಾಟವನ್ನು ನಿಲ್ಲಿಸುವ ಬಗ್ಗೆ

40(142):- ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಕರ್ನಾಟಕ ರಾಜ್ಯಕ್ಕೆ ಹೊರ ರಾಜ್ಯಗಳಿಂದ ಪ್ರತಿದಿನ ಬರುತ್ತಿರುವ ಹಾಲಿನ ಪ್ರಮಾಣವೆಷ್ಟು? ಇದರಲ್ಲಿ ಬೆಂಗಳೂರು ನಗರಕ್ಕೆ ಬರುತ್ತಿರುವ ಪ್ರಮಾಣವೆಷ್ಟು?

ಆ. ಈ ಹಾಲಿನ ಗುಣಮಟ್ಟ ಸೇವನಾ ಯೋಗ್ಯವೇ ಎಂದು ಪರೀಕ್ಷಿಸಲಾಗಿದೆಯೇ?

ಇ. ಅರೋಗ್ಯಕ್ಕೆ ಮಾರಕವಾಗಿದ್ದರೂ ಹೊರ ಭಾಗದ ಕೆಲವು ಖಾಸಗಿ ಸಂಸ್ಥೆಗಳಿಂದ ಹಾಲಿನ ಮಾರಾಟವನ್ನು ನಿಲ್ಲಿಸಲು ಸರ್ಕಾರ ಕ್ರಮಕೈಗೊಳ್ಳದಿರಲು ಕಾರಣಗಳೇನು?

ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಕರ್ನಾಟಕ ಹಾಲು ಮಹಾ ಮಂಡಳಿಯವರ ಅಂದಾಜುಗಳ ಪ್ರಕಾರ ಪ್ರತಿದಿನ ಕರ್ನಾಟಕ ರಾಜ್ಯದೊಳಕ್ಕೆ ಸುಮಾರು 5.00 ಲಕ್ಷ ಲೀಟರ್ ಹಾಲು ಬರುತ್ತಿದೆ. ಇದರ ಪೈಕಿ ಸುಮಾರು 1.40 ಲಕ್ಷ ಲೀಟರ್ ಹಾಲು ಬೆಂಗಳೂರು ನಗರಕ್ಕೆ ಬರುತ್ತಿದೆ.

ಆ. ಕಾಲಕಾಲಕ್ಕೆ ಹಾಲನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.

ಇ. ತಿದ್ದುಪಡಿ ಮಾಡಲಾದ ಹಾಲು ಮತ್ತು ಹಾಲು ಉತ್ಪನ್ನಗಳ ಆದೇಶದ ಪ್ರಕಾರ ಅಂತರ ರಾಜ್ಯ ಹಾಲು ಸಾಗಾಣಿಕೆಯನ್ನು ನಿಷೇದಿಸಲು ಅವಕಾಶವಿಲ್ಲ. ಆದಾಗ್ಯೂ ಹೊರ ರಾಜ್ಯಗಳಿಂದ ಬರುತ್ತಿರುವ ಕಲಬೆರಕೆ ಹಾಲನ್ನು ನಿಷೇದಿಸಲು ಆರೋಗ್ಯ ಅಧಿಕಾರಿಗಳು ಪರೀಕ್ಷೆ ಮಾಡುತ್ತಿರುವರು.

ಶ್ರೀ ಎಸ್. ಸುರೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ಸಚಿವರು ಸಿಲ್ಕ್‌ನಿಂದ ಮಿಲ್ಕ್‌ಗೆ ಬಂದರೂ ಸಹ ರೇಷ್ಮೆಯಂತಹ ಉತ್ತರವನ್ನೇ ಕೊಡುತ್ತಾರೆ. ಬಹಳ ನುಣುಪಾಗಿ ಎಲ್ಲೂ ಸಿಕ್ಕಿಹಾಕಿಕೊಳ್ಳಬಾರದೆಂದು. ರಾಜ್ಯಕ್ಕೆ ಎರಡು ರೀತಿಯ ಹಾಲು ಬರುತ್ತಿದೆ. ಒಂದು ಟಿನ್‌ನಲ್ಲಿ, ಅದನ್ನು ಈರೋಡ್ ಮಿಲ್ಕ್ ಎಂದು ಕರೆಯುತ್ತಾರೆ. ಅದು ಜನರಿಗೆ ಮಾರಕವಾಗುವಂತಹ ಹಾಲು ಅದು ವಿಷ, ಅದು ಬಿಳಿದ್ರವದ ವಿಷ. ಅದನ್ನು 'ಹಾಲು' ಎಂದು ರಾಜಾ ರೋಷವಾಗಿ ಬೆಂಗಳೂರು ನಗರದಲ್ಲಿ ಮಾರುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಎರಡನೆಯದಾಗಿ ಪ್ಯಾಕ್ಡ್ ಮಿಲ್ಕ್, ಕೆಎಂ.ಎಫ್‌ಗೆ ಏಟು ಬೀಳುವ ರೀತಿಯಲ್ಲಿ ಬರುತ್ತಿದೆ. ಈರೋಡ್ ಮಿಲ್ಕ್ ಬಗ್ಗೆ ಇದೇ ಸದನದಲ್ಲಿ ನಾವು ಪ್ರಸ್ತಾಪ ಮಾಡುತ್ತಾ ಬರುತ್ತಿದ್ದೇವೆ. ನಾವು ಪ್ರಸ್ತಾಪಿಸಿದ ಮಾರನೇ ದಿವಸ ಅಲ್ಲಿ ಹೋಗಿ ಹಾಲನ್ನು ಸೀಜ್ ಮಾಡಿ ಸ್ಪಾರಂ ಮಾಟರ್ ಡ್ರೈನ್‌ಗೆ ಚೆಲ್ಲುತ್ತಾರೆ. ಆದರೆ ಕ್ರಮ ಮಾತ್ರ ಏನೂ ತೆಗೆದುಕೊಳ್ಳುವುದಿಲ್ಲ. ಏಕೆ ಹೆದರಿಕೆಯೇ? 'ಈರೋಡ್ ಮಿಲ್ಕ್' ದಂಧೆ ಏನಿದೆ ಅದನ್ನು ನಿಲ್ಲಿಸಲು ಸರ್ಕಾರಕ್ಕೇನು ಭಯ? ಯಾವ ಶಕ್ತಿ ಇದರ ಹಿಂದಿದೆ? ಆ ಹಾಲು ಕೆಟ್ಟು ಹೋಗುವ ಸ್ಥಿತಿಯಲ್ಲಿ ಬೆಂಗಳೂರಿಗೆ ಬರುತ್ತಿದೆ. ಬಿಳಿಯಾಗಿರಬೇಕೆಂಬ ಒಂದೇ ಕಾರಣಕ್ಕೆ Hydrogen-peroxide, urea, caustic soda, white gun powder ಇವುಗಳನ್ನೆಲಾ ಸೇರಿಸಿ, 'ಭಾರತ್' ಟಾಕೀಸಿನ ಹತ್ತಿರ ಮಾರುತ್ತಿದ್ದಾರೆ. ಇದು ಇಡೀ ಸರ್ಕಾರದ ಎಲ್ಲಾ ಇಲಾಖೆಗಳಿಗೂ ಗೊತ್ತು. ಆದರೆ, ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿಲ್ಲ. ಜನರು ಅದನ್ನು ಕುಡಿದು ಹಾಳಾದರೂ ಪರವಾಗಿಲ್ಲ, ನಾವು ಕ್ರಮ ತೆಗೆದುಕೊಳ್ಳುವುದಿಲ್ಲವೆಂಬುದು ಸರ್ಕಾರದ ನೀತಿ ಇದ್ದರೆ ಏನು ಉಪಯೋಗ? ಹೆರಿಟೇಜ್, ಸ್ವಾಸ್ತಿಕ್, ಆರೋಗ್ಯ, ಧೂಧ್‌ವಾಲಾ, ಗೋಮಾತಾ, ಸಿಕೆಸಿ ಇವು ಹಾಲಿನ ಹೆಸರುಗಳು. ಪ್ಯಾಕೇಜ್ ಮೇಲೆ ಪ್ಯಾಕೇಜಿನಿಂದ ಬರುತ್ತಿರುವ ಹಾಲು. ಈ ಹಾಲು ಕರ್ನಾಟಕಕ್ಕೆ ಧಾರಾಕಾರವಾಗಿ ಹರಿದು ಬರುತ್ತಿರುವುದರಿಂದ ಕರ್ನಾಟಕ ರೈತರಿಗೆ ದೊಡ್ಡ ಏಟು ಬೀಳುತ್ತಿದೆ. ಇದನ್ನು ನಿಲ್ಲಿಸದಿದ್ದರೆ, ಕೆಎಂಎಫ್ ಕೆಲವೇ ದಿವಸಗಳಲ್ಲಿ ಅಥವಾ ತಿಂಗಳಲ್ಲಿ ಇನ್ನೊಂದು ಮೈಸೂರು ಲ್ಯಾಂಪ್ಸ್ ಆಗುತ್ತದೆ. ಆ ದೃಷ್ಟಿಯಿಂದ ಈ ಟಿನ್ ಹಾಲು, ಈರೋಡ್ ಹಾಲು, ಇದರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಕೆಎಂಎಫ್‌ಗೆ, ನಮ್ಮ ರೈತರಿಗೆ ಹಾನಿ ಮಾಡುವಂಥ ಪ್ಯಾಕೇಜ್ ಹಾಲಿನ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ. ಮಹದೇವ:- ಹಾಳು ಮಾಡುವುದಕ್ಕೆ ನೀವು ಮಾಡಿಬಿಟ್ಟು, ಮತ್ತೆ ನಮ್ಮನ್ನೇಕೆ ದೂರುತ್ತೀರಿ? ಮಾನ್ಯ ಭೈರೇಗೌಡರಿಗೆ ಬೇರೇನೂ ಕೆಲಸವಿಲ್ಲ.

ಅಧ್ಯಕ್ಷರು:- ತಾವು ಉತ್ತರ ಹೇಳಿ.

ಶ್ರೀ ಸಿ. ಭೈರೇಗೌಡ:- ಇವರು ಮಾಡಿರುವ ತಪ್ಪಿಗೆ, ಸದಾಶಿವನಿಗೆ ಅದೇ ಜ್ಞಾನವೆಂದು, ಇವರ ಕನಸು ಮನಸ್ಸಿನಲ್ಲಿಯೂ ನಾನು ಸಿಂಹವಾಗಿ ಇವರನ್ನು ಕಾಡುತ್ತಿದ್ದೇನೆ. ನಾನು ಸುಮ್ಮನೆ ಕುಳಿತಿದ್ದರೂ ಕೂಡ ನನ್ನ ಹೆಸರು ಜಪ ಮಾಡುತ್ತಾರೆ. ಇನ್ನೆಷ್ಟು ಅವ್ಯವಹಾರ, ಕಳಪೆ ದರ್ಜೆಯ ಕೆಲಸ ಮಾಡಿದ್ದಾರೆಂದು ಹೇಳುವುದಕ್ಕೆ ಇದೇ ಸಾಕ್ಷಿ.

ಶ್ರೀ ಎಂ. ಮಹದೇವ:- ನಾನು ಸುಮ್ಮನೇ ಇದ್ದರೂ ನನ್ನನ್ನು ಪ್ರೋವೋಕ್ ಮಾಡುತ್ತಿದ್ದಾರೆ.

ಅಧ್ಯಕ್ಷರು:- ನೀವು ಉತ್ತರ ಹೇಳಿ. I don't want any other discussion.

ಶ್ರೀ ಸಿ. ಭೈರೇಗೌಡ:- ಕಳ್ಳನ ಮನಸ್ಸು ಹುಳ್ಳಗೆ ಎಂದು, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡರು ಎಂದು, ಹಾಗಾದರೆ ಹೇಗೆ?

ಶ್ರೀ ಎಂ. ಮಹದೇವ:- ನೀವು ಮಾತನಾಡಿದ್ದಕ್ಕೆ ನಾನು ಮಾತನಾಡಿದೆ. ಇಲ್ಲದಿದ್ದರೆ, ನಾನು ಉತ್ತರ ಹೇಳುತ್ತಿದ್ದೆ. ಸಮ್ಮನಿರದೆ ನೀವು ನನ್ನನ್ನು ಪ್ರೊವೋಕ್ ಮಾಡುತ್ತಿದ್ದೀರಿ. ದಯವಿಟ್ಟು ನಾನು ಉತ್ತರ ಹೇಳುವವರೆಗೂ ಸಮ್ಮನೆ ಕುಳಿತುಕೊಳ್ಳುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಭೈರೇಗೌಡರೂ ಏನೂ ಮಾತನಾಡಿಲ್ಲ. ಸುಮ್ಮನೆ ಕುಳಿತಿದ್ದರು. ಈಗ ಅವರು ಸುಮ್ಮನೆ ಕುಳಿತುಕೊಳ್ಳಿ ಎನ್ನುತ್ತಿದ್ದಾರೆ.

ಶ್ರೀ ಎಂ. ಮಹದೇವ್:-ಫ್ಲಿಲ್ಕ್ ಹಾಳು ಮಾಡಿದಿರಿ, ಮಿಲ್ಕ್‌ಗೆ ಬಂದಿದ್ದೀರಿ ಎಂದು ಅವರು ಹೇಳಿದರು. ಅದು ನಿಮಗೆ ಕೇಳಿಸಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಯಾರು ಅದನ್ನು ಹೇಳಿದ್ದು. ಭೈರೇಗೌಡರು ಎಲ್ಲಿ ಹೇಳಿದರು?

ಶ್ರೀ ಎಂ. ಮಹದೇವ:- 2001-02ನೇ ಸಾಲಿನಲ್ಲಿ ಈರೋಡ್‌ನಿಂದ ಬಂದಿರುವ ಹಾಲಿನ ಬಗ್ಗೆ ಕೆಲವು ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾಖಲು ಮಾಡಿದ್ದೇವೆ. ಈ ಬಗ್ಗೆ ಆ ಪ್ರಕರಣಗಳು ವಿವಿಧ ಹಂತದಲ್ಲಿವೆ. ದಿನಾಂಕ 20.6.2001ರಂದು ಬೆಂಗಳೂರಿಗೆ ಬಂದ 9 ಲಾರಿಗಳಲ್ಲಿ 8 ಲಾರಿಗಳಲ್ಲಿ ಹಾಲು ಇತ್ತು. ಆ ಹಾಲನ್ನು ವಶಪಡಿಸಿಕೊಂಡು ಅವರ ಮೇಲೆ ಕೋರ್ಟಿನಲ್ಲಿ ಪ್ರಕರಣ ದಾಖಲಿಸಿದ್ದೇವೆ. ನಗರಸಭೆಯ ಆರೋಗ್ಯ ಅಧಿಕಾರಿಗಳು ತಪಾಸಣೆ ಮಾಡಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಆದೇಶವನ್ನು ಕೊಟ್ಟಿದೆ. ನಾವು ನೇರವಾಗಿ ತಪಾಸಣೆ ಮಾಡಿ ಕ್ರಮ ತೆಗೆದುಕೊಳ್ಳಲು ನಮಗೆ ಕಾನೂನಿಗೆ ತೊಡಕಿರುವುದರಿಂದ ನಗರದ ಆರೋಗ್ಯ ಇಲಾಖಾಧಿಕಾರಿಗಳು ಈ ಕೆಲಸವನ್ನು ಮಾಡಬೇಕಾಗುತ್ತದೆ. ನಾವು ತಕ್ಷಣದಿಂದ ಸಮಾಲೋಚನೆ ಮಾಡುತ್ತಿದ್ದೇವೆ. ಸರ್ಕಾರ ಈ ವಿಚಾರದಲ್ಲಿ ಇದಕ್ಕೋಸ್ಕರ, ಹೊರರಾಜ್ಯದಿಂದ ಬರುವ ಕಲಬೆರಕೆ ಹಾಲನ್ನು ತಡೆಯಲು ಕಾನೂನಿನ ವ್ಯಾಪ್ತಿಯಲ್ಲಿ ಏನಾದರೂ ಕಠಿಣ ಕ್ರಮ ತೆಗೆದುಕೊಳ್ಳಬಹುದೇ ಅದಕ್ಕೋಸ್ಕರ ಸಿಬ್ಬಂದಿಯನ್ನು ನೇಮಿಸಲು ನಗರಸಭೆಯ ಆರೋಗ್ಯಾಧಿಕಾರಿಗಳ ಜೊತೆಯಲ್ಲಿ ಸೇರಿ ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತಿಸುತ್ತಿದೆ. ಮಾನ್ಯ ಸುರೇಶ್‌ಕುಮಾರ್‌ರವರು ಒಳ್ಳೆಯ ಪ್ರಶ್ನೆ ಎತ್ತಿದ್ದಾರೆ

ಮತ್ತು ಸಲಹೆ ಕೊಡುತ್ತಿದ್ದಾರೆ. ಶೀಘ್ರದಲ್ಲಿ ಕಾನೂನಿನ ವ್ಯಾಪ್ತಿಯಲ್ಲಿ ಏನೇನು ಮಾಡಬೇಕೋ ಅದನ್ನು ಮಾಡಲಿಕ್ಕೆ ಸರ್ಕಾರ ಪ್ರಯತ್ನಿಸುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಕೋಲಾರ ಜಿಲ್ಲೆಯೊಂದರಲ್ಲೇ 1300 ಸಹಕಾರ ಸಂಘಗಳಲ್ಲಿ ನಾವು ಒಂದು ದಿವಸಕ್ಕೆ 6 ಲಕ್ಷದ 20 ಸಾವಿರ ಲೀಟರ್ ಹಾಲನ್ನು ಉತ್ಪಾದಿಸುತ್ತಿದ್ದೇವೆ. ನಮಗೆ ಕೇವಲ ಎರಡೂವರೆ ಲಕ್ಷ ಲೀಟರ್ ಹಾಲು ಮಾರಲಿಕ್ಕೆ ಅವಕಾಶ ಕೊಡುತ್ತೀರಿ. ಬೇರೆ ರಾಜ್ಯಗಳವರು 5 ಲಕ್ಷ ಲೀಟರ್ ಹಾಲನ್ನು ನಮ್ಮ ರಾಜ್ಯದಲ್ಲಿ ಮಾರುತ್ತಿದ್ದಾರೆ. ಲೆಬರ್‌ಲೈಜೇಷನ್, ಗ್ಲೋಬಲೈಜೇಷನ್ ಎಲ್ಲಾ ಆಗಿದ್ದರೂ ಕೂಡ ಅದರ ಜೊತೆಗೆ ಕಲಬೆರಕೆ ಹಾಲಿದ್ದರೂ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ. ಈ ಬಗ್ಗೆ ನನ್ನ ಅನ್ನಿಸಿಕೆ ಏನೆಂದರೆ, ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುವ ಹಾಲನ್ನು ಕಂಟ್ರೋಲ್ ಮಾಡುತ್ತೀರಿ, ಬೇರೆ ರಾಜ್ಯದ ಹಾಲನ್ನು ಇಲ್ಲಿಗೆ ತರಿಸುತ್ತೀರಿ. ಒಂದು ಲಕ್ಷ ಲೀಟರ್ ಹಾಲನ್ನು ಪೌಡರ್‌ಗೆ ಕನ್‌ವರ್ಟ್ ಮಾಡಬೇಕಾದರೆ 4 ರೂಪಾಯಿ 15 ಪೈಸೆ ಬೇಕಾಗುತ್ತದೆ. ಡಿಸ್ಟ್ರಿಕ್ಟ್ ಮಿಲ್ಕ್ ಯೂನಿಯನ್ಸ್ ನಷ್ಟದಲ್ಲಿವೆ. ಹಾಲು ಮಾರಲಿಕ್ಕೆ ಮದರ್-ಡೇರಿಯವರು ಅಡ್ಡ ಹಾಕುತ್ತಾರೆ. ಹೊಳೆ ನೀರು ಕುಡಿಯಲು ದೊಣ್ಣೆ ನಾಯಕನ ಅಪ್ಪಣೆ ಎಂದು ನೀವು ಏಕೆ ಮಾಡುತ್ತೀರಿ? ಲೆಬರ್‌ಲೈಜೇಷನ್, ಗ್ಲೋಬಲೈಜೇಷನ್ ಆದಾಗ ಬೇರೆ ರಾಜ್ಯದ ಅನೇಕ ಕಂಪನಿಗಳ ಹಾಲನ್ನು ತರಿಸುವ ಅಗತ್ಯವೇನಿದೆ? ನೀವು ಅದನ್ನು ನಿಲ್ಲಿಸಿದರೆ ನಮ್ಮ ರೈತರಿಗೆ ಅನುಕೂಲವಾಗುತ್ತದೆ. ಆದುದರಿಂದ, ಇದರ ಬಗ್ಗೆ ಸರ್ಕಾರವೇನಾದರೂ ಯೋಚಿಸಿದೆಯೇ? ನಮ್ಮ ಹಾಲನ್ನು ಬೆಂಗಳೂರು, ಕೋಲಾರ, ಮೈಸೂರು ಈ ಕಡೆಗಳಲ್ಲಿ ಯಾರಾದರೂ ಆಗಬುಹುದು ಅವರು ಮಾರಲಿಕ್ಕೆ ಅವಕಾಶ ಕೊಡುತ್ತೀರಾ? ಹಾಲು ಪೌಡರ್‌ಗೆ ಕನ್‌ವರ್ಟ್ ಆಗುವುದರಿಂದ 4 ರೂಪಾಯಿ 15 ಪೈಸೆ ಜಾಸ್ತಿ ಬಿದ್ದು, ಅವರು ಕಷ್ಟ ಅನುಭವಿಸುತ್ತಿದ್ದಾರೆ. ಅದು ನಮ್ಮ ರೈತರ ಮೇಲೆ ಬೀಳುತ್ತದೆ. ಗ್ರಾಹಕರ ಮೇಲೆ ಒಂದು ರೂಪಾಯಿ ಜಾಸ್ತಿ ಹಾಕುತ್ತೀರಿ. ಅದರಲ್ಲಿ 45 ಪೈಸೆ ಮಾತ್ರ ಸಂಬಂಧಪಟ್ಟ ಯೂನಿಯನ್‌ಗೆ ಕೊಡುತ್ತೀರಿ. ಉಳಿದ ಹಣವನ್ನು ಮದರ್ ಡೇರಿಗೆ ಕೊಡುತ್ತಿದ್ದೀರಿ. ಏಜೆಂಟ್‌ಗೆ 15 ಪೈಸೆ ಕೊಡುತ್ತೀರಿ. ತಾವು ಯಾವ ತರಹ ಸ್ಪರ್ಧಾತ್ಮಕವಾಗಿ ನಮ್ಮ ಹಾಲನ್ನು ಮಾರಲು ಯೋಚಿಸಿದ್ದೀರಿ?

ಅಧ್ಯಕ್ಷರು:- ಅನಿಮಲ್ ಹಸ್ಬೆಂಡ್ರಿ ಡಿಪಾರ್ಟ್‌ಮೆಂಟ್ ಡಿಮಾಂಡ್ಸ್ ಚರ್ಚೆಗೆ ಬಂದಾಗ ಮಾತನಾಡಿ

12.30 ಪಿ.ಎಂ

ಶ್ರೀ ಎಂ. ಮಹದೇವ್:- ಕರ್ನಾಟಕದಲ್ಲಿ ಉತ್ಪನ್ನವಾಗುವ ಹಾಲನ್ನು ಕರ್ನಾಟಕದಲ್ಲಿ ಬಳಸುವುದಕ್ಕೆ ನಾವು ಮೊದಲನೇ ಆದ್ಯತೆ ಕೊಟ್ಟು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ. ಹೊರರಾಜ್ಯಗಳಿಂದ ಬರುವ ಹಾಲನ್ನು ತಡೆಗಟ್ಟಲು ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಲು ಶೀಘ್ರವಾಗಿ ನಿನ್ನೆ ಉನ್ನತಾಧಿಕಾರಿಗಳ ಸಭೆಯನ್ನು ಮಾಡಿದ್ದೇವೆ. ಇವತ್ತು ಸಹ ಸಭೆ ಸೇರಬೇಕು ಎಂದು ಕೊಂಡಿದ್ದೇವೆ. ಶುದ್ಧವಾದ ಹಾಲನ್ನು ಕರ್ನಾಟಕದ ಜನತೆಗೆ ವಿತರಿಸಲಿಕ್ಕೆ ನಾವು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ರಾಜ್ಯದ ಜನತೆಗೆ ಹಾಲಿನ ದರದಲ್ಲಿ ಯಾವುದೇ ರೀತಿಯ ತೊಂದರೆಯಾಗಬಾರದು. ಒಂದು ರೂಪಾಯಿ ಹೆಚ್ಚಳ ಮಾಡಿರುವ ಬಗ್ಗೆ ಅವರು ಕೇಳಿದ್ದಾರೆ. ಇದರಲ್ಲಿ 60 ಪರ್ಸೆಂಟ್ ರೈತರಿಗೆ ವಾಪಸ್ ಹೋಗಲಿದ್ದು ಉಳಿದ 40 ಪರ್ಸೆಂಟ್ ವಿದ್ಯುತ್

ದರ, ಡೀಸಲ್ ದರ, ಕಾಸ್ಟಿಕ್ ಸೋಡಾ, ಇಂಥಾದ್ದಕ್ಕೆ ಹೋಗುತ್ತದೆ. ಆದ್ದರಿಂದ, ನಮ್ಮ ರಾಜ್ಯದ ರೈತರಿಗೆ ಹಾಲಿನ ದರದಲ್ಲಿ ಯಾವುದೇ ರೀತಿಯ ತೊಂದರೆಯಾಗಿಲ್ಲ. ಇಲ್ಲಿ ಎಷ್ಟು ಹಾಲು ಉತ್ಪನ್ನವಾಗುತ್ತದೆ ಅಷ್ಟು ಹಾಲು ನಮ್ಮರಾಜ್ಯಕ್ಕೆ ಬಳಸುವಂತೆ ಮಾಡಿ,ಹೊರ ರಾಜ್ಯಗಳಿಂದ ಬರುವ ಹಾಲನ್ನು ತಡೆಗಟ್ಟಲು ಕಠಿಣವಾದ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್:- ನಾವು ಕೇಳಿದ್ದಕ್ಕೆ ತಾವು ಸರಿಯಾದ ಉತ್ತರ ಕೊಡಲಿಲ್ಲ. ಅದೇನು ಒಂಬತ್ತು ಕೇಸ್ ಹಿಡಿದಿದ್ದು ಬೇರೆ ಬೇರೆ ಹಂತದಲ್ಲಿದೆ ಎಂದು ನಾವು ಹೇಳಿದಿರಿ 1997ನೇ ಇಸವಿಯಿಂದ 30 ಕೇಸ್‌ಗಳು ಬೇರೆ ಬೇರೆ ಹಂತದಲ್ಲಿದ್ದು ಅವು ಯಾವುದೂ ಇತ್ಯರ್ಥವಾಗುವುದಿಲ್ಲ. ನನ್ನ ಪ್ರಶ್ನೆ ಏನೆಂದರೆ, ಪ್ರತಿ ದಿವಸ ವಿಷ ಕುಡಿದು ಜನ ಸಾಯುತ್ತಿದ್ದರಲ್ಲಾ, ಸ್ಲಮ್‌ಗಳಲ್ಲಿ ಹೋಗುವ ಹಾಲು ಏಳು ರೂಪಾಯಿಗೆ ಒಂದು ಲೀಟರ್ ಸಿಕ್ಕುತ್ತದೆ. ಜನ ಕುಡಿಯುತ್ತಾರೆ. ಅನೇಕ ಸಣ್ಣ ಪುಟ್ಟ ಹೋಟೆಲ್‌ಗಳಿಗೂ ಹಾಲೂ ಹೋಗುತ್ತದೆ. ಅಲ್ಲಿ ಜನ ಕಾಫಿ, ಟೀ, ಕುಡಿಯುತ್ತಾರೆ. ಸರ್ಕಾರ ನಾಗರೀಕರನ್ನು ಕಾಪಾಡದಿದ್ದರೆ ಇನ್ನೇತಕ್ಕೆ ಈ ಸರ್ಕಾರ ಇರಬೇಕು? ಅದಕ್ಕಾಗಿ ನಾನು ಹೇಳುವುದು, ಮಹಾನಗರ ಪಾಲಿಕೆ ಏನೋ ಕೆಲಸ ಮಾಡುತ್ತಿದೆ. ಅದರೆ ಅವರಿಗೆ ಶಕ್ತಿ ಸಾಲದು, ಇದಕ್ಕೆ ನಿಮ್ಮ ಇಲಾಖೆಯ ಜೊತೆಗೆ ಟ್ರಾನ್ಸ್‌ಪೋರ್ಟ್ ಇಲಾಖೆ ರಾಜ್ಯದ ಆರೋಗ್ಯ ಇಲಾಖೆ, ಬೆಂಗಳೂರಿನ ಡಿಸಿ ಹಾಗೂ ಪೋಲೀಸ್ ಇವರೆಲ್ಲರನ್ನೂ ಸೇರಿಸಿಕೊಂಡು ಅತ್ತಿ ಬೆಲೆನಲ್ಲಿಯೇ ಅಡ್ಡ ಹಾಕಬೇಕು. ಇವರು ಹೋಗಿ ಭಾರತ್ ಟಾಕೀಸ್ ಹತ್ತಿರ ಕಾಯುತ್ತಿರುತ್ತಾರೆ. ಅವರು ಬೇರೆ ಬೇರೆ ರೂಟ್‌ಗಳಲ್ಲಿ ಬಂದು ಮಾರಾಟ ಮಾಡಿಕೊಂಡು ಹೋಗುತ್ತಾರೆ. ಈ ಬಗ್ಗೆ ಆಗ್ರಹ ಏನೆಂದರೆ, ಸರ್ಕಾರದ ಪರಮೋಚ್ಚ ನೀತಿ ಏನೆಂದರೆ, ನಾಗರೀಕರು ವಿಷ ಕುಡಿದು ಸಾಯಬಾರದು, ಈ ಹಾಲಿನ ಹೆಸರಿನಲ್ಲಿ ವಿಷ ಕುಡಿದು ಸಾಯಬಾರದು. ಅದಕ್ಕಾಗಿ ಈ ವಿಷವನ್ನು ಕೂಡಲೇ ನಿಲ್ಲಿಸುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಿ, ಅಥವಾ ಯಾರಾದರೂ ರಾಜಕಾರಣಿ ಅಥವಾ ಅಧಿಕಾರಿಯ ಹಸ್ತ ಇದರ ಹಿಂದೆ ಇದ್ದು, ನಿಮ್ಮ ಕೈಯಲ್ಲಿ ಆಗದೇ ಇದ್ದರೆ ಆದನ್ನಾದರೂ ಹೇಳಿಬೇಡಿ. ಹೆರಿಟೇಜ್ ಹಾಗೂ ಸ್ವಸ್ತಿಕ್ ಎನ್ನುವ ಹಾಲು ಏನು ಬರುತ್ತದೆ ಇವುಗಳು ಆಂಧ್ರ ಪ್ರದೇಶದ ರೈತ ಸಂಘಗಳು, ರೈತ ಸಹಕಾರ ಸಂಘಗಳನ್ನು, ಹಾಲು ಉತ್ಪಾದಕರ ಸಂಘಗಳನ್ನು ಮುಳುಗಿಸಿ ಇವತ್ತು ಅಲ್ಲಿ ಮೆರದಾಡುತ್ತಿವೆ. ನಂತರ ಶಿಕಾರಿಯಾಗುವುದು ಕರ್ನಾಟಕದ ಹಾಲು ಉತ್ಪಾದಕರ ಸಂಘದವರು ಅವರ ಜೊತೆಗೆ ನೀವು ಕಾಂಪಿಟೇನ್‌ಗೆ ಇಳಿಯದಿದ್ದರೆ, ಅವರು ಕೊಡುವ ರೇಟ್‌ಗೆ ನಮ್ಮ ರೈತರು ಹಾಲು ಮಾರುತ್ತಾರೆ. ಕೊನೆಗೆ ಕೆಎಂಎಫ್ ಮುಳುಗುತ್ತದೆ. ಕೊನೆಗೆ ಹೆರಿಟೇಜ್ ಇಲ್ಲಿ ಬಂದು ತನ್ನ ಹೆರಿಟೇಜ್‌ನ್ನು ಉಳಿಸಿಕೊಳ್ಳುತ್ತದೆ. ಆದುದರಿಂದ, ರೈತರ ರಕ್ಷಣೆ ಹಾಗೂ ನಾಗರೀಕರ ಪ್ರಾಣ, ಇವೆರಡನ್ನು ಉಳಿಸುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

ಶ್ರೀ ಎಂ ಮಹದೇವ್:- ಕ್ವಾಲಿಟಿ ಹಾಲನ್ನು ಕೆಎಂಎಫ್‌ನಿಂದ ಕೊಡುವುದಕ್ಕೆ ನಾವು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್:- ಹಾಗಾದರೆ ಈಗ ಕ್ವಾಲಿಟಿ ಹಾಲು ಕೊಡುತ್ತಿಲ್ಲವೇ?

ಶ್ರೀ ಎಂ. ಮಹದೇವ್:- ಇನ್ನೂ ಹೆಚ್ಚಿನ ಕ್ವಾಲಿಟಿ ಹಾಲು ಕೊಡುತ್ತೇವೆ. ಕರ್ನಾಟಕದ ಕ್ವಾಲಿಟಿ ಹಾಲನ್ನು ಕೊಡುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್:- ಕೊಡುತ್ತಿದ್ದೇವೆಂದು ಹೇಳ್ರಿ.

ಶ್ರೀ ಎಂ. ಮಹದೇವ್:- ಆಯಿತು ಕೊಡುತ್ತಿದ್ದೇವೆ. ನೀವು ಹೊರಗಡೆಯಿಂದ ಎದುರ ವಿಷಪೂರಿತ ಹಾಲು ಎಂದು ತಾವೇನು ಹೇಳಿದಿರಿ. ಅದನ್ನು ತಡೆಗಟ್ಟಲು ಕಠಿಣವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಮೊದಲೇ ಹೇಳಿದ್ದೇವೆ. ಕಾನೂನಿಗೆ ವ್ಯಾಪ್ತಿಯಲ್ಲಿ ಏನೇನು ಮಾಡಬೇಕು ಅದೆಲ್ಲವನ್ನು ಮಾಡುತ್ತೇವೆ. ತಾವು ಒಂದು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದೀರಿ ಮಹಾನಗರಪಾಲಿಕೆ ನಮ್ಮ ಇಲಾಖೆ, ಕೆಎಂಎಫ್ ಸಿಬ್ಬಂದಿ ವರ್ಗ ಹಾಗೂ ಪೋಲೀಸ್ ಈ ಎಲ್ಲರ ಸಂಯುಕ್ತಾಶ್ರಯದಲ್ಲಿ ನಮ್ಮ ಕರ್ನಾಟಕದ ಬಾರ್ಡರ್ ಏನಿದೆ. ಆಂಧ್ರ ಇರಬಹುದು ತಮಿಳುನಾಡು ಇರಬಹುದು. ಎಲ್ಲಿಂದ ಆ ಹಾಲು ಬರುತ್ತದೆ ಆ ಹಾಲು ಬರುವುದನ್ನು ತಡೆಗಟ್ಟಲು, ತಾವು ಕೊಟ್ಟಿರುವ ಉತ್ತಮವಾದ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಅದನ್ನು ಅನುಷ್ಟಾನಕ್ಕೆ ಖಂಡಿತವಾಗಿ ತರುತ್ತೇವೆ. ಅದರ ಬಗ್ಗೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಆ ವಿಷಪೂರಿತ ಹಾಲನ್ನು ಕರ್ನಾಟಕದ ಒಳಗಡೆ ಬರುವುದಕ್ಕೆ ಬಿಡುವುದಿಲ್ಲ ಎನ್ನುವ ಆಶ್ವಾಸನೆಯನ್ನು ನಾನು ಈ ಸಂದರ್ಭದಲ್ಲಿ ಕೊಡಲಿಚ್ಚಿಸುತ್ತೇನೆ. ಹೆರಿಟೇಜ್ ಹಾಲು ಇಲ್ಲಿಗೆ ಬರುವುದನ್ನು ಕೂಡ ತಡೆಗಟ್ಟಲು ನಾವು ಕ್ರಮ ಕೈಗೊಳ್ಳುತ್ತೇವೆ. ಗುಣಮಟ್ಟದ ಹಾಲು ಇಲ್ಲವೆಂದ ಮೇಲೆ ಅದನ್ನು ತಡೆಗಟ್ಟಲೇಬೇಕಲ್ಲವೆ?

ಶ್ರೀ ಸಿ. ಭೈರೇಗೌಡ:- ತಾವು ಕೊಟ್ಟಿರುವ ಉತ್ತರ (ಅ) (ಇ) ವನ್ನು ಗಮನಿಸಿದ್ದೇನೆ. ಕಳೆದ ಮೂರು ವರ್ಷಗಳಿಂದ ಎಷ್ಟು ಸ್ಯಾಂಪಲ್ಸ್ ಡ್ರಾ ಮಾಡಿದ್ದೀರಿ ಎಷ್ಟು ಸ್ಯಾಂಪಲ್ಸ್ ಅನ್ನು ಅನ್‌ಲೈಸ್ ಮಾಡಿದ್ದೀರಿ? ಅದರ ಬಗ್ಗೆ ಉತ್ತರವೇನು? ಎಷ್ಟು ಮೊಕದ್ದಮೆಗಳನ್ನು ಹೂಡಿದ್ದೀರಿ? ಯಾವುದಾದರೂ ಕೇಸ್‌ಗಳಲ್ಲಿ ಅದು ಅಕ್ವಿಟ್ ಆಯಿತೋ? ಕನ್‌ವಿಕ್ಷನ್ ಆಯಿತೋ? ಏನಾಯಿತಿ? ಎಂಬುದರ ಬಗ್ಗೆ ವಿವರ ಕೊಡಿ. ಇದರ ಜೊತೆಗೆ ಕೆಲವು ಕಾನೂನು ತೊಡಕುಗಳಿವೆ ಎಂದು ಹೇಳುತ್ತಿದ್ದೀರಿ, ಕಾರ್ಪೋರೇಷನ್ ನವರಿಗೆ ನೂರೆಂಟು ಕೆಲಸ ಇರುತ್ತದೆ. ಈ ಹಾಲನ್ನು ಪರೀಕ್ಷೆ ಮಾಡುವುದಕ್ಕಾಗಿ ನಿಮ್ಮ ಫುಡ್ ಅಡಾಲ್ಟ್ರೇಷನ್ ಆಕ್ಟ್ ಪ್ರಕಾರ ಒಂದು ಲ್ಯಾಬ್ ಬೇಕಾಗುತ್ತದೆ. ನೀವೇ ಒಂದು ಲ್ಯಾಬ್ ಅನ್ನು ಸೆಟ್-ಅಪ್ ಮಾಡಿ ಅದನ್ನು ನೋಟಿಫಿಕೇಷನ್ ಮಾಡಿ, ಹಾಲು ಎಲ್ಲಿಂದಲೋ ಬರಲಿ ಆ ಹಾಲನ್ನು ಪರೀಕ್ಷೆಗೆ ಗುರಿಪಡಿಸಬಹುದಲ್ಲವೇ? ಈ ರೀತಿ ಪರೀಕ್ಷೆಗೊಳಪಟ್ಟ ನಂತರವೇ ಸದರಿ ಹಾಲನ್ನು ರಾಜ್ಯದ ಒಳಗಡೆ ಬಿಡಬೇಕು ಎಂದು ಕಡ್ಡಾಯಗೊಳಿಸುತ್ತೀರಾ?

ಶ್ರೀ ಎಂ. ಮಹದೇವ್:- ಅವರ ಮೊದಲನೇ ಪ್ರಶ್ನೆಗೆ ನನಗೆ ಸಪರೇಟಾಗಿ ಪ್ರಶ್ನೆ ಹಾಕಿದರೆ ನಾನು ಉತ್ತರಿಸುತ್ತೇನೆ. ಮಾನ್ಯ ಸುರೇಶ್ ಕುಮಾರ್ ಹಾಗೂ ಮಾನ್ಯ ಭೈರೇಗೌಡರವರು ಈ ವಿಚಾರದಲ್ಲಿ ಉತ್ತಮವಾದ ಸಲಹೆಗಳನ್ನು ಕೊಟ್ಟಿರುತ್ತಾರೆ. ಅವುಗಳನ್ನು ನಾವು ಅನುಷ್ಟಾನಗೊಳಿಸಿಕ್ಕೆ ಪ್ರಯತ್ನಿಸುತ್ತೇವೆ.

ಶ್ರೀ ಸಿ. ಭೈರೇಗೌಡ:- ನಾನು ಅಂಕಿ-ಅಂಶ ಕೇಳಿದರೆ ಅವರು ಇಲ್ಲವೆಂದು ಹೇಳಿದರೆ ಇದು ಎಂಥ ಉತ್ತರ? ನಾನು ಮೂರು ವರ್ಷಗಳ ಅಂಕಿ ಅಂಶಗಳನ್ನು ಕೇಳಿದ್ದೇನೆ.

ಅಧ್ಯಕ್ಷರು:- ಇಬ್ಬರ ಮೇಲೆ ಕೇಸ್ ಹಾಕಿದ್ದೇವೆಂದು ಅವರು ಮೊದಲೇ ಹೇಳಿದ್ದಾರೆ.

ಶ್ರೀ ಎಂ. ಮಹದೇವ್:- ನನಗೆ ಅವರು ಪ್ರಶ್ನೆ ಕಳುಹಿಸಿ ಕೊಡಲಿ ನಾನು ನಂತರ ಉತ್ತರ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು:- ಪೋರ್ಟ್‌ಫೋಲಿಯೋ ಚೇಂಜ್ ಆಗಿದೆ. ಇದನ್ನು ಅವರು ಹೊಸದಾಗಿ ತೆಗೆದುಕೊಂಡಿದ್ದಾರೆ.

ಶ್ರೀ ಸಿ. ಭೈರೇಗೌಡ:- ಅದಕ್ಕೂ ಇದಕ್ಕೂ ಸಂಬಂಧವಿಲ್ಲ Government is a continuous body.

ಅಧ್ಯಕ್ಷರು:- ಮೂರುವರ್ಷಗಳದ್ದು ಲೆಕ್ಕ ತೆಗೆಯಬೇಕಲ್ಲವೆ? ಅವರು ಸಪರೇಟಾಗಿ ಉತ್ತರ ಹೇಳುತ್ತೇವೆಂದು ಹೇಳಿದ್ದರಲ್ಲವೆ? ತಮ್ಮ ಮೊದಲನೇ ಪ್ರಶ್ನೆಗೆ ಕ್ರೋಢೀಕರಿಸಿ ಸಪರೇಟಾಗಿ ಉತ್ತರ ಹೇಳುತ್ತೇವೆಂದು ಅವರು ಹೇಳಿದರಲ್ಲ.

ಶ್ರೀ ಭೈರೇಗೌಡ:- ಏಕೆ ಅಂದರೆ ಇದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿಲ್ಲ? ಇದು ನನ್ನ ಆರೋಪ ಪ್ರತಿ ದಿನ ನಡೆಯುತ್ತಿರುವ ಈ ದಂಧೆಯನ್ನು ನಿಲ್ಲಿಸುವುದರಲ್ಲಿ ಸರ್ಕಾರ ವಿಫಲವಾಗಿದೆ. ಇದು ನನ್ನ ಆರೋಪ.

ಅಧ್ಯಕ್ಷರು:- ಮಾನ್ಯ ಅರಗ ಜ್ಞಾನೇಂದ್ರ ರವರೇ ತಾವು ಮಾತನಾಡಿ.

ಶ್ರೀ ಅರಗ ಜ್ಞಾನೇಂದ್ರ:- ಕರ್ನಾಟಕದಲ್ಲಿ ಹಾಲಿನ ಬಳಕೆದಾರರ ಆರೋಗ್ಯವನ್ನು ಹಾಳು ಮಾಡುತ್ತಿದ್ದಾರೆ. ರೈತರನ್ನು ಹಾಗೂ ಹಾಲು ಉತ್ಪಾದಕರನ್ನು ಕೂಡು ಹಾಳು ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಈ ಮಿಲ್ಕ್ ಇಂಡಸ್ಟ್ರಿಯ ಮೇಲೆ ಲಕ್ಷಗಟ್ಟಲೆ ಜನ ಅವಲಂಬಿತರಾಗಿದ್ದಾರೆ. ಇವರಿಗೆ ನೀವು ಬದಲಿ ಉದ್ಯೋಗ ಕೊಡಲಿಕ್ಕೆ ಆಗುವುದಿಲ್ಲ. ಇವತ್ತು ರಾಜ್ಯದಲ್ಲಿ ಉತ್ಪನ್ನವಾಗುವ ಹಾಲನ್ನು ಮಾರಾಟ ಮಾಡಲಿಕ್ಕೆ ಆಗದೇ ಡೈರಿಗಳು ಮಿಲ್ಕ್ ಹಾಲಿಡೇ-ಗಳನ್ನು ಘೋಷಣೆ ಮಾಡಿವೆ. ನಮ್ಮ ರೈತರಿಗೆ ಒಂದು ಲೀಟರ್‌ಗೆ ಸುಮಾರು ಒಂದು ರೂಪಾಯಿನಷ್ಟು ಕಡಿಮೆ ಮಾಡಿದ್ದಾ ಏಕೆಂದರೆ, ಹಾಲು ಮಾರಾಟ ಆಗುವುದಿಲ್ಲ. ಹಾಲನ್ನು ಚರಂಡಿಗೆ ಹಾಕಬೇಕಾಗುತ್ತದೆ ಎನ್ನುವ ಕಾರಣವನ್ನು ನೀಡುತ್ತಾರೆ. ಈ ದೃಷ್ಟಿಂಯಿಂದ ತಾವು ಇದನ್ನು ಲಘುವಾಗಿ ಪರಿಗಣಿಸಬಾರದು. ಇವತ್ತು ಮಿಲ್ಕ್ ಡೈರಿಯಲ್ಲಿ ಕೆಲಸ ಮಾಡುವಂಥ ಮತ್ತು ಹಾಲನ್ನು ಕರೆದುಕೊಡುವಂಥ ಸುಮಾರು ಜನಗಳ ಜೀವನ್ಮರಣದ ಪ್ರಶ್ನೆ ಇದರಲ್ಲಿ ಇದೆ. ಬೆಂಗಳೂರು ನಗರ ದೊಡ್ಡ ಬಳಕೆದಾರರ ಕೇಂದ್ರ ಬೇರೆ ರಾಜ್ಯದ ಹಾಲೂ ಬಂದು ಇಲ್ಲಿ ಮಾರಾಟವಾಗುವುದಾದರೆ ಅದು ಆರೋಗ್ಯವಂಥ ಹಾಲು ಅಲ್ಲವೆಂದು 2-3 ವರ್ಷಗಳಿಂದ ಸಾಬೀತಾಗಿದೆ. ಈಗಿರುವ ಕಾನೂನು ಹಾಗೂ ಸಿಬ್ಬಂದಿ ಸಾಕು ಆದರೆ ಸರ್ಕಾರಕ್ಕೆ ಬದ್ಧತೆ ಇರಬೇಕಾಗುತ್ತದೆ. ನಿಮಗೆ ಮನಸ್ಸು ಬೇಕು. ತತ್‌ಕ್ಷಣ ಬೆಳಗಿನ ಜಾವ 3 ಗಂಟೆಯಲ್ಲಿ ಅಲ್ಲಿ ಹಾದು ಅವರನ್ನು ತಡೆಯುತ್ತೀರಾ? ಪ್ರತಿ ದಿವಸ ಮಿಲ್ಕ್ ಸ್ಯಾಂಪಲ್‌ಗಳನ್ನು ಡ್ರಾ ಮಾಡುತ್ತೀರಾ? ಅವರುಗಳನ್ನು ತಡೆಯಲು ನಾಳೆಯಿಂದಲೇ ಕ್ರಮ ಜರುಗಿಸುತ್ತೀರಾ? ಇಂಥ ಕ್ರಮಗಳನ್ನು ನೀವು ವಾರ್‌ಫುಟಿಂಗ್‌ನಲ್ಲಿ ಆರಂಭಿಸಬೇಕು.

ಶ್ರೀ ಎಂ. ಮಹದೇವ್:- ಮಾನ್ಯ ಸುರೇಶ್ ಕುಮಾರ್‌ರವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಏನು ಅನ್ಯಾಯವಾಗುತ್ತಿದೆ? ಏನು ಮಾಡಬೇಕು?ಹೇಗೆ ತಡೆಗಟ್ಟಬೇಕು. ಎನ್ನುವ

ಸಲಹೆಯನ್ನು ಕೊಟ್ಟದ್ದಾರೆ. ಆ ಸಲಹೆಯಲ್ಲಿಯಯೇ ಅವರಿಗೆ ಉತ್ತರ ಸಿಗುತ್ತದೆ. ನಾವು ತಕ್ಷಣದಿಂದ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ:- ರಾಜ್ಯದಲ್ಲಿ ಅನೇಕ ರೀತಿಯಲ್ಲಿ ಅನೇಕ ಅಪರಾಧಗಳಾಗುತ್ತಿವೆ. ಅದರಲ್ಲಿ ಈ ಹಾಲಿನ ವಿಚಾರ ಕೂಡ ಸೇರಿದೆ. ಇಷ್ಟೊಂದು ಬಲಿಷ್ಟವಾದ ಸರ್ಕಾರವಿದ್ದು, ಹೊರ ರಾಜ್ಯದಿಂದ ತಂದು ಮಾರಾಟ ಮಾಡುವ ವಿಷಪೂರಿತವಾದ ಹಾಲನ್ನು ಕಂಟ್ರೋಲ್ ಮಾಡುವ ಶಕ್ತಿ ಇಲ್ಲವೆಂದರೆ ಇದು ಅಸಹಾಯಕತೆನೋ ಅಥವಾ ಯಾರಾದಾದರೂ ದಾಕ್ಷಿಣ್ಯನೋ ನಿಮ್ಮ ಕೈಯಲ್ಲಿ ಕಂಟ್ರೋಲ್ ಮಾಡಕ್ಕಾಗಲೇ/ ಇದರಲ್ಲಿ ಏನು ಇದೆ? ಜನ ಸರ್ಕಾರದ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ?

ಅಧ್ಯಕ್ಷರು: - ಮಾಡುತ್ತೇವೆಂದು ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ:- ಇದೇ ಪರಿಸ್ಥಿತಿ ಎಲ್ಲಾ ಇಲಾಖೆಗಳಿಗೆ ಮತ್ತು ಕಾನೂನಿಗೆ ಅಪ್ಲೈ ಆದರೆ ದೇಶದ ಗತಿ ಏನಾಗುತ್ತದೆ? ಎರಡು ಮೂರು ವರ್ಷಗಳಿಂದ ಈ ಸದನದಲ್ಲಿ ಈ ವಿಷಯ ಪ್ರತಿ ಸಾರಿ ಚರ್ಚೆಗೆ ಬರುತ್ತಿದೆ. ಸರ್ಕಾರದವರಿಗೆ ಇದನ್ನು ಮಾಡುವುದಕ್ಕೆ ಮನಸ್ಸಿಲ್ಲವೋ ಅಥವಾ ಮಾಡುವುದಕ್ಕೆ ಆಗುವುದಿಲ್ಲವೋ?

ಅಧ್ಯಕ್ಷರು:- ಮಾನ್ಯ ಸಚಿವರಾದಂಥ ಶ್ರೀ ಮಹದೇವ್‌ರವರು ಮಾಡುತ್ತಾರೆ.

ಶ್ರೀ ಸಿ. ಭೈರೇಗೌಡ:- ಅವರು ಹಿಂಗೆ ರೇಷ್ಮೆ ಇಲಾಖೆಯಲ್ಲಿ ಇದ್ದುದ್ದರಿಂದ ರೇಷ್ಮೆ ಗೂಡಿನ ಬೆಲೆ ಸುಮಾರು 40 ರೂಪಾಯಿಗೆ ಇಳಿದಿದೆ.

(ಗೊಂದಲ)

ಶ್ರೀ ಎಂ. ಮಹದೇವ್:- ನಾನು ಹಿಂದೆ ಇದ್ದಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಅಭಿವೃದ್ಧಿಯಾಗಿದೆ. ಅದನ್ನು ಹೇಳುವುದಕ್ಕೆ ಅವರಿಗೆ ಸೌಜನ್ಯವೂ ಇಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ:- ಸಂಬಂಧಪಟ್ಟವರನ್ನು ಹಿಡಿದು ಜೈಲಿಗೆ ಹಾಕುವುದಕ್ಕೆ ಆಗುವುದಿಲ್ಲವೇ? ಇದಕ್ಕಿಂತ ದೊಡ್ಡ ಅಪರಾಧ ಇನ್ನು ಏನು ಬೇಕು/

ಅಧ್ಯಕ್ಷರು:- ಮಾಡುತ್ತೇವೆಂದು ಅವರು ಹೇಳಿದ್ದಾರೆ.

ಶ್ರೀ ಎಂ. ಮಹದೇವ್:- ಮಾನ್ಯ ಅಧ್ಯಕ್ಷರೆ, ಆಡಳಿತದಲ್ಲಿ ಇನ್ನೊಬ್ಬರು ಹಸ್ತಕ್ಷೇಪ ಮಾಡುವುದಕ್ಕೆ ನಾವು ಬಿಡುವುದಿಲ್ಲ. ಇದುವರೆಗೂ ಸಹ ಈ ರೀತಿಯಾಗಿ ಆಗಿಲ್ಲ ಆ ಬಗ್ಗೆ ಕಂಠಿಣವಾದ ಕ್ರಮ ತೆಗೆದುಕೊಳ್ಳುತ್ತೇನೆ. ಎಂದು ನಾನು ಪದೇ ಪದೇ ಹೇಳುತ್ತಿದ್ದೇನೆ. ನಾವು ಯಾರ ಮುಲಾಜಿಗೂ ನಮ್ಮ ಇಲಾಖೆ ಕೆಲಸ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ:- ಇನ್ನು ಎರಡು ಅಥವಾ ಮೂರು ತಿಂಗಳಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳಿ.

ಶ್ರೀ ಎಂ. ಮಹದೇವ್:- ಮಾನ್ಯ ಅಧ್ಯಕ್ಷರೆ, ತಕ್ಷಣದಲ್ಲಿ ನಾವು ಕ್ರಮ ತೆಗೆದುಕೊಳ್ಳತ್ತೇವೆ. ಮತ್ತೆ ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಅಡಳಿತದಲ್ಲಿ ಇನ್ನೊಬ್ಬರ ಹಸ್ತಕ್ಷೇಪವನ್ನು ನಾವು ಸಹಿಸುವುದಿಲ್ಲ ಹಾಗೆಯೇ ಹಸ್ತಕ್ಷೇಪ ಮಾಡುವುದಕ್ಕೆ ಬಿಡುವುದಿಲ್ಲ ಮಾನ್ಯ ಸದಸ್ಯರು ರಾಜ್ಯದ ಜನತೆಯ ದೃಷ್ಟಿಯಿಂದ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿದ್ದು ಅದನ್ನು ಅನುಷ್ಠಾನಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು:- ಈಗ ಇನ್ನೂ ಮೂರು ಪ್ರಶ್ನೆಗಳಿಗೆ ಉಳುದುಕೊಂಡಿವೆ. ಇದನ್ನು ಮುಂದಿನ ಅಧವಾ ಅದರ ಮುಂದಿನ ವಾರ ತೆಗೆದುಕೊಳ್ಳುತ್ತೇನೆ. ಆದರೆ, ಯಾವುದೇ ಕಾರಣಕ್ಕೂ ಲ್ಯಾಪ್ಸ್ ಆಗುವುದಿಲ್ಲ. ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ:- (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ದಿನಾಂಕ: 10.07.2002ರ ಲಿಖಿತದ ಮೂಲಕ ಉತ್ತರಿಸುವಂತಹ 25 ಪ್ರಶ್ನೆಗಳ ಪೈಕಿ 23 ಪ್ರಶ್ನೆಗಳಿಗೆ ಸಂಬಂಧಪಟ್ಟಂಥ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:- ಮಂಡಿಸಲಾಯಿತು.

ಅನುಬಂಧ (1)

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಡಿ.ಬಿ. ಚಂದ್ರೇಗೌಡ ಕಾನೂನು ಮತ್ತು ಸಂಸದೀಯ ಸಚಿವರು ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿ) ಪರವಾಗಿ ಅವರು:- ಮಾನ್ಯ ಅಧ್ಯಕ್ಷರೆ,

1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ ಕಲಂ 47ರ ಮೇರೆಗೆ

I. 1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2000-2001ನೇ ಸಾಲಿನ ವಾರ್ಷಿಕ ಅಡಳಿತ ವರದಿಯನ್ನು ಮಂಡಜಿಸುತ್ತೇನೆ.

II ಶ್ರೀ ಡಿ.ಬಿ. ಚಂದ್ರೇಗೌಡ, ಅಧ್ಯಕ್ಷರು ಮಂಡಿಸಲಾಯಿತು (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರ ಪರವಾಗಿ ಅವರು:- ಮಾನ್ಯ ಅಧ್ಯಕ್ಷರೆ 1980ರ ಕಾಡಾ ಅಧಿನಿಯಮ 25ನೇ ಕಲಂ ಮೇರೆಗೆ:-

2. ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ 2000-2001ನೇ ಸಾಲಿನ ವಾರ್ಷಿಕ ಅಡಳಿತ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:- ಮಂಡಿಸಲಾಗಿದೆ.